## Grant of Irrigation Pumpsets in Hosadurga Taluk

*Q.—922. Sri G. T. RANGAPPA (Hosadurga).—

Will the Government be pleased to state :—

(a) the number of applications received during the past three years for the grant of irrigation pumpsets in Hosadurga Taluk ;

(b) out of them, the number of ryots who have been granted irrigation pumpsets in the said Taluk ?

A.—Sri H. C. BORAIAH (Parliamentary Secretary to the Minister for Agriculture).—

(a) Diesel—7 (Seven)
Electrical—25 (Twenty-five).

(b) Diesel—4 (Four)
Electrical—16 (Sixteen).

ಶ್ರೀ ಜಿ. ಟಿ. ರಂಗಪ್ಪ.—ನಾನು (ಎ) (ಬಿ) ಮತ್ತು (ಸಿ) ಎಂದು ಮೂರು ಪ್ರಶ್ನೆಗಳನ್ನು ಕಳುಹಿಸಿದ್ದೆ, ಎರಡಕ್ಕೆ ಉತ್ತರಬಂದಿದೆ. ಇನ್ನು (ಸಿ)ಗೆ ಉತ್ತರಬಂದಿಲ್ಲ ಕಾರಣವೇನು ?

ಅಧ್ಯಕ್ಷರು.—ಅದಕ್ಕೆ ಕಾರಣನ್ನು ನನ್ನಲ್ಲಿಬಂದು ಕೇಳಬೇಕು. ನಮ್ಮ ಆಫೀಸಿಗೆ ಬನ್ನಿ.

ಶ್ರೀ ಜಿ. ಟಿ. ರಂಗಪ್ಪ.—ಅರ್ಜಿ ಬಂದದ್ದು ಯಾವ ತಾರೀಖು ? ಮಂಜೂರಾದ್ದು ಯಾವ ತಾರೀಖು ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳು ನನ್ನಲ್ಲಿಲ್ಲ.

Sri GANJI VEERAPPA.—In a scarcity area like Hosadurga even the number of applications are few. What are the reasons for not sanctioning the entire number ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿಗೆ ಒಟ್ಟು 230 ಅಪ್ಲಿಕೇಷನ್‌ಗಳು ಬಂದಿದ್ದವು. ಆ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಇವನ್ನು ವಿಲೇವಾರಿ ಮಾಡಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ಬಂದ ಅರ್ಜಿಗಳನ್ನು ಮಂಜೂರು ಮಾಡುವುದಕ್ಕೆ ಇರತಕ್ಕ ತೊಂದರೆಯೇನು ?

ಶ್ರೀ ಎಚ್. ಸಿ. ಬೋರಯ್ಯ.—ಅಷ್ಟು ದುಡ್ಡಿಲ್ಲ.

Sri ALLUM KARIBASAPPA.—May I know whether Government is going to allot more number of pump-sets in scarcity areas like Bellary and certain other parts of the State ?

ಶ್ರೀ ಎಚ್. ಸಿ. ಬೋರಯ್ಯ.—ಅರ್ಜಿಗಳ ಸಂಖ್ಯೆಗನುಸಾರವಾಗಿ ಮಾಡುತ್ತೇವೆ.

ಶ್ರೀ ಜಿ. ಟಿ. ರಂಗಪ್ಪ.—ರೈತರಿಂದ ಬಂದ ಅರ್ಜಿಗಳೆಷ್ಟು ? ನಷ್ಟೆ ಮಾಡಿರುವುದೆಷ್ಟು

(ಉತ್ತರವಿಲ್ಲ)

ಶ್ರೀ ಬಿ. ಚನ್ನಬೈರೇಗೌಡ.—ಇದನ್ನು ಒಂದು ಪ್ರಯಾರಿಟಿ ಬೇಸಿಸ್ ಮೇಲೆ ಹಂಚುತ್ತೀರೋ, ಅಥವಾ ನಿಮಗೆ ಇಷ್ಟಬಂದವರಿಗೆ ಕೊಡುತ್ತೀರೋ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥಾ ಪಕ್ಷಪಾತ ಭಾವನೆ ನಮ್ಮ ಸರ್ಕಾರಕ್ಕಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಕೇಳಿದಷ್ಟು ಸರಬರಾಯಿ ಮಾಡಲು ಸರ್ಕಾರಕ್ಕಿರುವ ತೊಂದರೆ ಏನು ?

ಶ್ರೀ ಜಿ. ನಾರಾಯಣ ಗೌಡ.—ಸ್ವಲ್ಪ ಹಣದ ಕೊರತೆಯಿದೆ. ಹಾಗಿದ್ದರೂ ಒಂದು ಕೋಟಿ ರೂಪಾಯಿಗಳಲ್ಲಿ 90 ಲಕ್ಷ ರೂಪಾಯಿಗಳನ್ನು ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳಿಗೆ ಒದಗಿಸಿದ್ದೇವೆ. ಡಿಸೇಲ್ ಎಂಜಿನ್ನಿಗೆ ಇನ್ನಷ್ಟು ಹಣ ಸೇರಿಸಿ ಈಗ ಇದಕ್ಕೂ 52 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಜಿ. ಟಿ. ರಂಗಪ್ಪ.—ಈ ನೆಪದಲ್ಲಿ ಫ್ಲೋರ್ ಮಿಲ್ಲುಗಳಿಗೆ ಪವರ್ ಬಳಸುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ಜನ ಅರ್ಜಿ ಹಾಕಿದ್ದರು, ಎಷ್ಟು ಜನಗಳಿಗೆ ನಷ್ಟ ಮಾಡಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಇನ್ನೊಮ್ಮೆ ಪ್ರಶ್ನೆ ಕೇಳಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೂರು ವರ್ಷಗಳಿಂದ ಪಂಪುಸೆಟ್ಟುಗಳನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಹೋದ ವರ್ಷದಲ್ಲಿ ಎಷ್ಟು ಪಂಪುಸೆಟ್ಟುಗಳನ್ನು ಕೊಟ್ಟಿದ್ದೀರಿ ?

ಶ್ರೀ ಜಿ. ನಾರಾಯಣ ಗೌಡ.—ಚಿತ್ರದುರ್ಗ ಜಿಲ್ಲೆಯಿಂದ ಹೋದ ವರ್ಷ ಎಂದರೆ 62-63ರಲ್ಲಿ 123 ಅರ್ಜಿಗಳು ಡೀಸೆಲ್ಲು ಸೆಟ್ಟುಗಳಿಗಾಗಿ ಬಂದಿತ್ತು. ಇದರಲ್ಲಿ 70 ಮಂಜೂರು ಆಗಿದೆ. ಎಲೆಕ್ಟ್ರಿಕಲ್ ಸೆಟ್ಟುಗಳಿಗಾಗಿ 1,393 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ 670 ಮಂಜೂರಾಗಿದೆ.

ಶ್ರೀ ವಿ. ಮುಸಿಯಪ್ಪ.—ಪಂಪುಸೆಟ್ಟುಗಳನ್ನು ರೈತರಿಗಾಗಿ ಕೊಡುವುದನ್ನು ಕೆಲವು ಕಡೆ ಯೋಜನೆಗಳನ್ನು ಮಾಡಿರುವಂತೆ ಮಾಡಿ ಮುಂದುವರಿಸುತ್ತೀರೋ ಅಥವಾ ಈಗಲೇ ನಿಲ್ಲಿಸುತ್ತಾರೋ ?

ಶ್ರೀ ಜಿ. ನಾರಾಯಣ ಗೌಡ.—ಇನ್ನೂ ಮುಂದುವರಿಸುತ್ತೇವೆ.

ಶ್ರೀ ಜಿ. ಟಿ. ರಂಗಪ್ಪ.—ಇಲ್ಲಿ 20 ಸೆಟ್ಟುಗಳು ಮಂಜೂರಾಗಿದೆ ಎಂದು ಹೇಳಿದಿರಿ. ಇದರಲ್ಲಿ ರೈತರಿಗಾಗಿ ಹಂಚಿರುವುದು ಎಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—ವಿವರಗಳು ಇಲ್ಲಿಲ್ಲ.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ಸರಕಾರದವರು ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿ ಪಂಪುಸೆಟ್ಟುಗಳನ್ನು ಕೊಂಡುಕೊಳ್ಳುತ್ತಿದ್ದಾರೆಂದು ಇಲ್ಲಿರುವ ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್ನಿನವರು ಈಚೆಗೆ ಕೊಡುವ ಪಂಪುಸೆಟ್ಟುಗಳ ಬೆಲೆಯನ್ನು ಇನ್ನೂ ಶೇಕಡಾ 22½ಯಷ್ಟು ಜಾಸ್ತಿ ಮಾಡಬೇಕೆಂದಿದ್ದಾರೆನ್ನುವುದು ನಿಜವೇ ?

ಶ್ರೀ ಎಚ್. ಸಿ. ಬೋರಯ್ಯ.—ಗೊತ್ತಿಲ್ಲ.

---

## Scale of Pay fixed to the Employees of the Kampli Sugar Factory.

*Q.—960. Sri ALLUM KARIBASAPPA (Kurugodu).—

Will the Government be pleased to state :—

(*a*) the scale of pay fixed to the employees of the Kampli Sugar Factory ;

(*b*) whether the pay fixed is in accordance with the rules of the Wage Board ;

(*c*) whether they would rectify the variations, if any, in the pay scales ?

*A.*—Sri KONDAJJI BASAPPA (Deputy Minister for Co-operation).—

(*a*) *Vide* statement given below.

(*b*) Yes.

(*c*) Does not arise.